ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **683**
ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 04.03.2021
ಉತ್ತರಿಸುವ ಸಚಿವರು ಮುಖ್ಯಮಂತ್ರಿಗಳು

*****

	ಪ್ರಶ್ನೆ	ಉತ್ತರ
ಅ)	ಕೆಪಿಟಿಸಿಎಲ್ ಇಲಾಖೆಯು Research and Development ವಿಭಾಗ ಹೊಂದಿದೆಯೇ:	ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಆರ್ & ಡಿ ವಿಭಾಗವನ್ನು ಹೊಂದಿದೆ,
ಆ)	ಹಾಗಿದ್ದಲ್ಲಿ, ಇದು ಯಾವಾಗಿನಿಂದ ಅಸ್ತಿತ್ವದಲ್ಲಿದೆ: ಇಲ್ಲಿ ಎಷ್ಟು ಸಿಬ್ಬಂದಿ ಹಾಗೂ ತಜ್ಞರು ಕಾರ್ಯ ನಿರ್ವಹಿಸುತ್ತಿದ್ದಾರೆ: (ವಿವರ ಒದಗಿಸುವುದು)	ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಆರ್ & ಡಿ ವಿಭಾಗವು 1966 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರಗಳು ಈ ಕೆಳಕಂಡಂತಿವೆ:- (see table below)

ಕ್ರ. ಸಂ.	ಹುದ್ದೆ	ಸಂಖ್ಯೆ
1	ಮುಖ್ಯ ಇಂಜನಿಯರ್ (ವಿ)	1
2	ಅಧೀಕ್ಷಕ ಇಂಜನಿಯರ್ (ವಿ)	1
3	ಕಾರ್ಯನಿರ್ವಾಹಕ ಇಂಜನಿಯರ್ (ವಿ)	1
4	ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್ (ವಿ)	5
5	ಸಹಾಯಕ ಇಂಜನಿಯರ್ (ವಿ)	8
6	ಕಿರಿಯ ಸಹಾಯಕರು	1
7	ಟೈಪಿಸ್ಟ್	1
8	ಆಫೀಸ್ ಅಸಿಸ್ಟೆಂಟ್ ಗ್ರೇಡ್-2	1
9	ದಫೇದಾರ್	1
10	ದಫ್ತರಿ	1

	ಪ್ರಶ್ನೆ	ಉತ್ತರ
ಇ)	ಸದರಿ ವಿಭಾಗವು ಇಲ್ಲಿಯವರೆಗೆ ಕೈಗೊಂಡಿರುವ ಸಂಶೋಧನೆಗಳ ಬಗ್ಗೆ ಮಾಹಿತಿ ಒದಗಿಸುವುದು:	ಆರ್ ಅಂಡ್ ಡಿ ವಿಭಾಗದಲ್ಲಿ ನಿಯತಕಾಲಿಕ ತೈಲ ಮಾದರಿ ಪರೀಕ್ಷೆ, ಟ್ಯಾನ್-ಡೆಲ್ಟಾ, ಮತ್ತು ಕೆಪಾಸಿಟೆನ್ಸ್, ಐಡ್ಯಾಕ್ಸ್, ಎಸ್.ಎಫ್.ಆರ್.ಎ., ಭೂ-ಸಂಪರ್ಕ ಸಮಗ್ರತೆ ಪರೀಶೀಲನೆ ಮತ್ತು ಹೊಸದಾಗಿ ನಿರ್ಮಿಸಲ್ಪಡುವ ಉಪಕೇಂದ್ರಗಳಿಗೆ ಮಣ್ಣು ನಿರೋಧಕತೆ ಪರೀಕ್ಷೆಯನ್ನು ಮಾಡಲಾಗುತ್ತದೆ
ಈ)	ಪ್ರಸ್ತುತ ಕೈಗೊಂಡಿರುವ ಸಂಶೋಧನೆಗಳಾವುವು:	ಆರ್ & ಡಿ ವಿಭಾಗದಲ್ಲಿ ಕೈಗೊಳ್ಳಲಾಗುವ ಪರೀಕ್ಷೆಗಳು ಈ ಕೆಳಕಂಡಂತಿವೆ:- 1. ಪ್ರತಿ ವರ್ಷ ರಾಜ್ಯಾದ್ಯಂತ ಸರಾಸರಿ 3000 ಪರಿವರ್ತಕಗಳಿಗೆ ಹೊಸದಾದ ಮತ್ತು ರೋಟಿನ್ ಪರೀಕ್ಷೆ, ಪರಿವರ್ತಕಗಳ ತೈಲ ಮಾದರಿ ಪರೀಕ್ಷೆಗಳನ್ನು (ಡಿಜಿಎ, ಫ್ಯೂರಾನ್ ಇತರೆ) ಆರ್ &ಡಿ ವಿಭಾಗದಲ್ಲಿ ಮಾಡಲಾಗುತ್ತದೆ. ಇದರಿಂದ ಬರುವ ಫಲಿತಾಂಶದಿಂದ ಪರಿವರ್ತಕಗಳ ವಿಶ್ಲೇಷಣೆ ಮಾಡಲಾಗುತ್ತದೆ. 2. ಪ್ರತಿ ವರ್ಷ 31.5 MVA ಮೇಲ್ಪಟ್ಟು ಸಾಮರ್ಥ್ಯದ ಸುಮಾರು 426 ಪರಿವರ್ತಕಗಳಿಗೆ ಟ್ಯಾನ್-ಡೆಲ್ಟಾ, ಮತ್ತು ಕೆಪಾಸಿಟೆನ್ಸ್, ಐಡ್ಯಾಕ್ಸ್, ಎಸ್.ಎಫ್.ಆರ್.ಎ., ಪರಿವರ್ತಕಗಳ ಪರೀಕ್ಷೆಗಳನ್ನು ಮಾಡಲಾಗುತ್ತದೆ. 3. 220 ಕೆವಿ ಮತ್ತು ಮೇಲ್ಪಟ್ಟ ಸುಮಾರು 118 ಉಪಕೇಂದ್ರಗಳಲ್ಲಿ ಅರ್ಥ ಇಂಟಿಗ್ರಿಟಿ ಪರೀಕ್ಷೆಯನ್ನು 2 ವರ್ಷಕ್ಕೊಮ್ಮೆ ಮಾಡಲಾಗುತ್ತದೆ.

		4. 220 ಕೆವಿ ಕೆಳಮಟ್ಟದ ಸುಮಾರು 1131 ಉಪಕೇಂದ್ರಗಳಲ್ಲಿ ಅರ್ಥ ಇಂಟಿಗ್ರಿಟಿ ಪರೀಕ್ಷೆಯನ್ನು5 ವರ್ಷಕ್ಕೊಮ್ಮೆ ಮಾಡಲಾಗುತ್ತದೆ. 5. ಹೊಸದಾಗಿ ನಿರ್ಮಿಸಲಾಗುವ ಉಪ ಕೇಂದ್ರಗಳಿಗೆ ಮಣ್ಣು ನಿರೋಧಕತೆ ಪರೀಕ್ಷೆಯನ್ನು ಮಾಡಲಾಗುತ್ತದೆ. 6. 220 ಕೆವಿ ಮತ್ತು ಮೇಲ್ಪಟ್ಟು ಉಪ-ಕೇಂದ್ರಗಳಲ್ಲಿ ಕೋರಿಕೆಯ ಮೇರೆಗೆ CT's ಮತ್ತು CVTs ಗಳಿಗೆ ಟ್ಯಾನ್-ಡೆಲ್ಟಾ ಪರೀಕ್ಷೆಯನ್ನು ಮಾಡಲಾಗುತ್ತದೆ. ಪ್ರಸ್ತುತ, ಈ ಕೆಳಕಂಡ ವಿಷಯಗಳ ಬಗ್ಗೆ ಪ್ರಾಯೋಗಿಕವಾಗಿ ಸಂಶೋಧನೆಯನ್ನು ಮಾಡಲಾಗುತ್ತಿದೆ. **ಎ: ಈಸ್ಟರ್ ಆಯಿಲ್ :** 1. ಈಸ್ಟರ್ ಆಯಿಲ್‌ಯಿಂದ ಪರಿವರ್ತಕದ ಪೇಪರ್ ಇನ್ಸುಲೇಷನ್ ಹೆಚ್ಚು ಬಾಳಿಕೆ ಬರುವುದು. 2. ಪರಿವರ್ತಕವು 15-20% ಹೆಚ್ಚುವರಿ ಲೋಡಿನೊಂದಿಗೆ ನಿರಂತರವಾಗಿ ಕಾರ್ಯನಿರ್ವಹಿಸಬಲ್ಲದು. 3. ಬೆಂಕಿ ಅನಾಹುತವನ್ನು ಕೂಡ ಕಡಿಮೆ ಮಾಡುತ್ತದೆ. **ಬಿ. ಕೆಮಿಕಲ್ ಅರ್ಥಿಂಗ್** : ಮಣ್ಣಿನ ನಿರೋಧಕತೆಯು ಹೆಚ್ಚಿರುವ ಕಡೆಯಲ್ಲಿ ಕೆಮಿಕಲ್ ಅರ್ಥಿಂಗ್ ಸಹಾಯದಿಂದ ವಿದ್ಯುತ್‌ವಿತರಣಾ ಕೇಂದ್ರದ ಸ್ಥಾಪನೆಗೆ ಅಗತ್ಯವಿರುವ ಜಾಗವು ಕಡಿಮೆಯಾಗುವುದು.
ಉ)	ಇವುಗಳಿಂದ ವಿದ್ಯುತ್ ವ್ಯವಸ್ಥೆ ಹಾಗೂ ಗ್ರಾಹಕರಿಗೆ ಆಗಿರುವ ಅನುಕೂಲಗಳೇನು:	ಸದರಿ ಪರೀಕ್ಷೆಗಳ ಫಲಿತಾಂಶದಿಂದ ಪರಿವರ್ತಕಗಳ ವಿಶ್ಲೇಷಣೆ ಮಾಡಿ ಪರಿಹಾರಕ ವರದಿಯನ್ನು ಎಲ್ಲಾ ಸಂಬಂಧಪಟ್ಟ ಉಪ ಕೇಂದ್ರಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗುತ್ತದೆ. ಇದರಿಂದ ಪರಿವರ್ತಕಗಳ ಬಾಳಿಕೆ ಹೆಚ್ಚುತ್ತದೆ ಹಾಗೂ ಗ್ರಾಹಕರಿಗೆ ನಿರಂತರ ವಿದ್ಯುತ್‌ವ್ಯವಸ್ಥೆಯನ್ನು ಒದಗಿಸಲು ಅನುಕೂಲವಾಗುತ್ತದೆ.
ಊ)	ಈ ವಿಭಾಗದ ಉನ್ನತೀಕರಣಕ್ಕೆ ಸರ್ಕಾರದ ಕ್ರಮಗಳೇನು?	2015-16 ರಲ್ಲಿ ಆರ್ & ಡಿ ವಿಭಾಗವನ್ನು ನವೀಕರಣಗೊಳಿಸಲಾಗಿದ್ದು, ಎಲ್ಲಾ ಹೊಸ ಮಾದರಿಯ ಮತ್ತು ಆಧುನಿಕ (Fully Automatic) ಉಪಕರಣಗಳನ್ನು ಖರೀದಿಸಲಾಗಿದೆ.

ಸಂಖ್ಯೆ: ಎನರ್ಜಿ 59 ಇಬಿಎಸ್ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ